ಸ್ಫೋಟಿಸಿದನು. ಅದರ ಫಲವಾಗಿ ತಾನು ಮೊದಲು ಬಲಿಯಾದನು, ಸ್ವಾಮಿಗಳು ತೀವ್ರವಾಗಿ ಘಾಸಿಗೊಂಡು ಆಸ್ಪತ್ರೆಯನ್ನು ಸೇರಿದರು. ಆ ಯುವಕನು ಸ್ವಾಮಿಗಳ ಶಿಷ್ಯನೇ ಆಗಿದ್ದು, ಮಾನಸಿಕ ಸಮತೋಲನವನ್ನು ಕಳೆದುಕೊಂಡಿದ್ದನು. ಅವನು ಮುಂದೇನು ಮಾಡಬೇಕು ಎಂಬುದನ್ನು ಕುರಿತಂತೆಯೂ ಸೂಚನೆಗಳನ್ನು ಸ್ವಾಮಿಗಳು ನೀಡಿದ್ದರು. ಆದರೂ ಅವನು ತನ್ನನ್ನು ತಿದ್ದಿಕೊಳ್ಳಲಾರದೆ ಅನಾಹುತವನ್ನೇ ನಡೆಸಿಬಿಟ್ಟನು. ಆಸ್ಪತ್ರೆಗೆ ಹೋಗುವ ದಾರಿಯಲ್ಲಿ ತ್ರಿಗುಣಾತೀತರು "ಪಾಪ ಆ ಪಾಪ್ರ ಏನಾದನೋ" ಎಂದು ಅವನ ಯೋಗಕ್ಷೇಮದ ಚಿಂತನೆಯನ್ನೇ ಮಾಡಿದರು.

ಆಸ್ಪತ್ರೆಯ ಚಿಕಿತ್ಸೆಯಿಂದ ಲಾಭವಾಗಲಿಲ್ಲ. ಹತ್ತಾರುದಿನ ದಾರುಣ ಯಾತನೆಯನ್ನು ಸಮಾಹಿತಚಿತ್ತರಾಗಿಯೇ ಅನುಭವಿಸುತ್ತ ಚಾಂದ್ರಮಾನ ಲೆಕ್ಕಾಚಾರದಂತೆ "ನಾನು ವಿವೇಕಾನಂದರ ಜನ್ಮದಿನದಂದು ದೇಹತ್ಯಾಗ ಮಾಡುತ್ತೇನೆ" ಎಂದು ಮೊದಲೇ ತಿಳಿಸಿ ೧೯೧೫, ಜನವರಿ ೧೧ ರಂದು ತಮ್ಮ ಐವತ್ತನೆಯ ವಯಸ್ಸಿಗೇ ಮಹಾಸಮಾಧಿಯನ್ನು ಪಡೆದುಕೊಂಡರು. ಸೈಪ್ರಸ್‌ಲಾನ್ ಎಂಬ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನಡೆಯಿತು. ಒಂದು ವರ್ಷ ಕಳೆದ ಬಳಿಕ ತ್ರಿಗುಣಾತೀತರ ಅವಶೇಷಗಳನ್ನು ಶಾಂತಿ ಆಶ್ರಮಕ್ಕೆ ಒಯ್ದು, ಅಲ್ಲಿನ ಎತ್ತರವಾದ ಸಿದ್ಧಗಿರಿಯಲ್ಲಿ ಸಂಸ್ಥಾಪಿಸಲಾಯಿತು.


**ತ್ರಿಗುಣಾತೀತ ವಚನವೇದ :** {೧} ಉಪನ್ಯಾಸ ಮಾಡುವವರಾಗಲಿ, ತರಗತಿಯ ಪಾಠಗಳನ್ನು ಮಾಡುವವರಾಗಲಿ ಅದನ್ನು ತಮ್ಮ ಆಧ್ಯಾತ್ಮಿಕ ಉನ್ನತಿಗಾಗಿ ಮಾಡುವ ಧಾರ್ಮಿಕ ಅನುಷ್ಠಾನವೆಂದು ಭಾವಿಸಬೇಕು. {೨} ಸದ್ಗುರುವಾದವನು ತಾನು ಮಾಡುವ ಉಪದೇಶಕ್ಕಿಂತ ತನ್ನ ಅನುಷ್ಠಾನ–ಆಚರಣೆಗಳಿಂದ ಶಿಷ್ಯರು ಪಾಠ ಕಲಿಯುವಂತೆ ಮಾಡಬೇಕು. {೩} ಅಧ್ಯಾತ್ಮಮಾರ್ಗಕ್ಕೆ ಅಡಿಪಾಯವಾದ ಶೀಲ ಎಂಬುದು ನಿರ್ಮಾಣವಾಗಬೇಕಾದರೆ ಅದಕ್ಕೆ ಶಿಸ್ತು ಎಂಬುದೇ ಮೂಲಮಂತ್ರವಾಗಬೇಕು. {೪} ನಿರಂತರ ಜಾಗೃತಿಯೇ ಸ್ವಾತಂತ್ರ್ಯದ ಬೆಲೆ; ಋಷಿಯಂತೆ ಬದುಕುತ್ತ ಕುದುರೆಯಂತೆ ಕೆಲಸಮಾಡು; ಮಾಡುವ ಕಾರ್ಯವನ್ನು ಈಗಿಂದೀಗಲೇ ಮಾಡಿಬಿಡು; ಮಾಡು ಇಲ್ಲವೆ ಮಡಿ– ಮುಂತಾದುವು ನಮ್ಮ ಬದುಕಿನ ಘೋಷವಾಕ್ಯಗಳಾಗಬೇಕು. {೫} ಭಗವಂತನನ್ನು ಪ್ರಾಮಾಣಿಕವಾಗಿ ಪ್ರೀತಿಸಿದರೆ ಎಲ್ಲವೂ ಒಳ್ಳೆಯದಾಗಿ ಪರಿಣಮಿಸುವಂತೆ ಅವನೇ ಮಾಡುತ್ತಾನೆ.

**ಪುಸ್ತಕ ಪರಿಚಯ**

## ಹಿಂದೂ ದೇವಾಲಯಗಳು – ಒಂದು ಸಮಗ್ರ ಪರಿಚಯ

**ಲೇಖಕರು :** ಸ್ವಾಮಿ ಹರ್ಷಾನಂದ ; **ಕನ್ನಡ ಭಾವಾನುವಾದ :** ಎನ್. ಪ್ರಭಾಕರ

**ಪ್ರಕಾಶಕರು:** ಶ್ರೀ ನಿತ್ಯಾನಂದ ಪ್ರಕಾಶನ, ಅಶೋಕನಗರ, ಬೆಂಗಳೂರು–50; **ಪುಟ :** 50 ; **ಬೆಲೆ :** ರೂ.15/–




ಜಗತ್ತಿನ ಎಲ್ಲ ಧರ್ಮಗಳೂ ಪೂಜಾಸ್ಥಾನಗಳನ್ನೂ, ದೇವಮಂದಿರಗಳನ್ನೂ ಹೊಂದಿವೆ. ಆದರೆ ಹಿಂದೂ ದೇವಾಲಯಗಳ ಐತಿಹ್ಯ, ಶಿಲ್ಪಕಲಾ ವೈವಿಧ್ಯ ಮತ್ತು ಧಾರ್ಮಿಕ ಮಹತ್ವ ಅನನ್ಯವಾದುವು. ಇವುಗಳನ್ನು ಪರಿಚಯ ಮಾಡಿಕೊಡುವ ಪುಟ್ಟಪುಸ್ತಕ ಇದು. ಗಾತ್ರದಲ್ಲಿ ಚಿಕ್ಕದಾದರೂ ಅತ್ಯಂತ ಉಪಯುಕ್ತ ಹಾಗೂ ಗಹನ ಅಂಶಗಳನ್ನು ಇದು ಹೊಂದಿದೆ. ಹನ್ನೆರಡು ಅಧ್ಯಾಯಗಳಲ್ಲಿ, ಹಿಂದೂ ದೇವಾಲಯಗಳ ಸಂಕ್ಷಿಪ್ತ ಚರಿತ್ರೆ, ದೇವಾಲಯದ ಸಂಕೇತಾರ್ಥ, ದೇವಾಲಯದ ನಿರ್ಮಾಣ ಹಂತಗಳು, ದೇವಾಲಯದ ಅಗತ್ಯ ಭಾಗಗಳು, ಪ್ರತಿಮಾಶಾಸ್ತ್ರ, ಧಾರ್ಮಿಕ ವಿಧಿ ಮತ್ತು ಆಚರಣೆಗಳು, ದೇವಾಲಯದ ಕಲೆ ಮತ್ತು ಕಲಾಕೌಶಲ್ಯ, ದೇವಾಲಯ ಮತ್ತು ಭಕ್ತರು, ದೇವಾಲಯ ಮತ್ತು ಅರ್ಚಕರು, ದೇವಾಲಯ ಮತ್ತು ಸಮಾಜ – ಈ ಎಲ್ಲ ವಿಷಯಗಳ ಕಿರುನೋಟ ನಮಗೆ ಇಲ್ಲಿ ದೊರಕುತ್ತದೆ. ಹೀಗಾಗಿ 'ಹಿಂದೂ ದೇವಾಲಯಗಳ ಮೇಲಿನ ಪುಟ್ಟ ವಿಶ್ವಕೋಶ' ಎಂದು ಇದನ್ನು ಕರೆದರೂ ತಪ್ಪಾಗಲಾರದು. ವಿಷಯಗಳಿಗೆ ಮೆರುಗು ಕೊಡುವಂತಹ ಸುಂದರ ರೇಖಾಚಿತ್ರಗಳ ಸರಣಿಯನ್ನೇ ನಾವಿಲ್ಲಿ ಕಾಣಬಹುದು. ದೇವಾಲಯದ ಭೂನಕ್ಷೆ ಮತ್ತು ಸಂಕೀರ್ಣ, ಸರಳ ವಿನ್ಯಾಸ, ವಿವಿಧ ಶೈಲಿಗಳು, ಶಿಖರಗಳ ಮಾದರಿ, ವಾಸ್ತುಪುರುಷ, ಪ್ರತಿಮೆಯೊಂದರ ಮುದ್ರೆಗಳು ಮತ್ತು ಆಯುಧಗಳು, ರಥ, ಧ್ವಜಸ್ತಂಭ, ಬಲಿಪೀಠ, ದೀಪಸ್ತಂಭ – ಹೀಗೆ ದೇವಾಲಯಕ್ಕೆ ಸಂಬಂಧಪಟ್ಟ ವಿವಿಧ ಭಾಗಗಳ ಚಿತ್ರಗಳು ಈ ಪುಸ್ತಕದಲ್ಲಿವೆ. ಲೇಖಕರಾದ ಪರಮಪೂಜ್ಯ ಸ್ವಾಮೀಜಿಯವರ ಅಪಾರ ಅಧ್ಯಯನ, ಬಹುಮುಖ ಪ್ರತಿಭೆ, ವಿಶ್ಲೇಷಣಾ ಹಾಗೂ ವಿವರಣಾ ಸಾಮರ್ಥ್ಯಗಳ ಸ್ಥೂಲ ಪರಿಚಯ ನಮಗಿಲ್ಲಿ ಆಗುತ್ತದೆ. ಯಾವುದೇ ವಿಷಯದ ಒಳಹೊಕ್ಕು, ಅದರ ಅಂತರಾರ್ಥವನ್ನು, ಸ್ವಾರಸ್ಯವನ್ನು ನಿರ್ದಿಷ್ಟವಾಗಿ ಹಾಗೂ ಸಂಕ್ಷಿಪ್ತವಾಗಿ ಹಿಡಿದಿಡುವ ಶುದ್ಧ ಬರವಣಿಗೆಯ ಶಕ್ತಿ ಸ್ವಾಮೀಜಿಯವರಿಗೆ ಸಿದ್ಧಿಸಿದೆ.

ಉದಾಹರಣೆಗೆ, ಕೇವಲ ಐದೂಕಾಲು ಪುಟಗಳಲ್ಲಿ (ಪುಟ ೯–೧೪) ದೇವಾಲಯದ ಸಂಕೇತಾರ್ಥವನ್ನು ಯಾವ ಸಂದೇಹವೂ ಬಾರದಂತೆ ಸ್ವಾಮೀಜಿ ಬಣ್ಣಿಸುತ್ತಾರೆ; ಜೊತೆಜೊತೆಗೇ ಚೇತೋಹಾರಿಯಾದ ಅನೇಕ ಮಾಹಿತಿಗಳನ್ನೂ ನೀಡುತ್ತ ಹೋಗುತ್ತಾರೆ. ದೇವಾಲಯವು ಮಾನವ ಮತ್ತು ಈಶ್ವರನಿಗೆ ಇರುವ ಕೊಂಡಿ ಎಂದು ಹೇಳುವ ಸ್ವಾಮೀಜಿಯವರು, 'ದೇವಾಲಯ', 'ಪ್ರಾಸಾದ', 'ವಿಮಾನ', 'ಗರ್ಭಗೃಹ' ಮುಂತಾದ ಪದಗಳ ನಿರ್ವಚನವನ್ನು ಮಾಡಿತೋರಿಸುತ್ತಾರೆ. ದೇವಾಲಯಗಳ ನಕ್ಷೆಯ ಹಿನ್ನೆಲೆಯಲ್ಲಿರುವ ಸೃಜನಾತ್ಮಕ ಭಾವನೆಯ ಬಗ್ಗೆ ನಮ್ಮ ಗಮನ ಸೆಳೆಯುತ್ತಲೇ, ದೇವಾಲಯವು ಭಗವಂತನ ವಿಶ್ವರೂಪವನ್ನು ಹಾಗೂ ಮಾನವನ ದೇಹಸ್ವರೂಪವನ್ನು ಕೂಡ ಪ್ರತಿನಿಧಿಸುತ್ತದೆ ಎನ್ನುವ ತಾಂತ್ರಿಕ ವಿಷಯದ ಕಡೆ ಗಮನ ಸೆಳೆಯುತ್ತಾರೆ. ದೇವಾಲಯದ ಅಸ್ತಿಭಾರದ ನಕ್ಷೆಯ ಮಹತ್ವವನ್ನು ಕಡೆಯಲ್ಲಿ ಬಣ್ಣಿಸುತ್ತ. ಅದು ಸಮರೂಪತೆಯ ಸಂಕೇತವಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಹೀಗೆ ನಾವು ತೆಗೆದುಕೊಂಡ ಒಂದೇ ಒಂದು ಅಧ್ಯಾಯದಲ್ಲಿ ಇಷ್ಟೆಲ್ಲ ವಿಷಯಗಳನ್ನು 'ಕನ್ನಡಿಯಲ್ಲಿ ಆನೆ'ಯನ್ನು ತೋರಿಸಿದ ಹಾಗೆ ಪ್ರದರ್ಶಿಸುವ ಸ್ವಾಮೀಜಿಯವರು ಇಡೀ ಗ್ರಂಥದಲ್ಲಿ ಪರಿಚಯಿಸುವ, ಎತ್ತಿತೋರಿಸುವ ಅತ್ಯಂತ ಸ್ವಾರಸ್ಯಕರ ಮಾಹಿತಿಗಳು ನೂರಾರು. ಹೀಗಾಗಿ ನಮ್ಮ ಸಂಸ್ಕೃತಿಯ ದ್ಯೋತಕದಂತೆ ಇರುವ ದೇವಾಲಯಗಳ ಬಗ್ಗೆ ತಿಳಿದುಕೊಳ್ಳಲು, ಅದರ ಮಹತ್ವವನ್ನು ಅರಿಯಲು ನಮ್ಮೆಲ್ಲರಿಗೂ, ಅದರಲ್ಲೂ ಯುವಜನಾಂಗಕ್ಕೆ ಉತ್ತಮ ಕೈಪಿಡಿಯಾಗಿದೆ ಈ ಪುಸ್ತಕ. ಅತ್ಯುತ್ತಮ ರಕ್ಷಾಕವಚ, ಮುದ್ದಾದ ಮುದ್ರಣ, ಚೆಂದದ ವಿನ್ಯಾಸ, ಗುಣಮಟ್ಟದ ಕಾಗದ – ಇವುಗಳು ಈ ಪುಸ್ತಕದ ಮೌಲ್ಯಕ್ಕೆ ಮತ್ತಷ್ಟು ಮೆರಗುತಂದಿವೆ; ಇದರ ಘನತೆಯನ್ನು ಮತ್ತಷ್ಟು ಹೆಚ್ಚಿಸಿವೆ. – ವಿಪ್ರ

ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಜಗದಾತ್ಮಾನಂದಜಿಯವರು ಅತ್ಯುತ್ತಮ ವಾಗ್ಮಿಗಳು, ಶ್ರೇಷ್ಠ ಸಮಾಜ ಚಿಂತಕರು. ಇವರ ಮಹತ್ವದ ಗ್ರಂಥ 'ಬದುಕಲು ಕಲಿಯಿರಿ'. ಇದು ಕನ್ನಡದ ಮೊಟ್ಟಮೊದಲನೆಯ ವ್ಯಕ್ತಿತ್ವವಿಕಸನ ಗ್ರಂಥವಾಗಿದ್ದು ಇದರ ಮೂರು ಲಕ್ಷ ಪ್ರತಿಗಳು ಈವರೆಗೆ ಮಾರಾಟವಾಗಿವೆ. ಇವರು ವಿದ್ಯಾರ್ಥಿಗಳ ನಡುವೆ ಕೆಲವು ದಶಕಗಳನ್ನು ಕಳೆದವರು; ಪರಿಣತ ಆಪ್ತಸಲಹೆಗಾರರಾಗಿದ್ದು, ಅನೇಕ ವಿದ್ಯಾರ್ಥಿಗಳ ಬಾಳನ್ನು ರೂಪಿಸಿದವರು.

ವಿದ್ಯಾಭ್ಯಾಸದ ಸಮಯದಲ್ಲಿ ವಿದ್ಯಾರ್ಥಿಯು ತನ್ನ ಏಳಿಗೆ ಹಾಗೂ ಸಾಮಾಜಿಕ ಹಿತಚಿಂತನೆಗಾಗಿ ದುಡಿಯುವ ಕಲೆಯನ್ನು ಕಲಿತುಕೊಳ್ಳಬೇಕು, ಇದಕ್ಕಾಗಿ ಐದು ಸೂತ್ರಗಳನ್ನು ಅನುಸರಿಸಬೇಕು.

ಇವು (೧) ಅರಿವಿನ ಹಂಬಲ (೨) ಶ್ರದ್ಧೆ (೩) ಶಕ್ತಿ (೪) ನೀತಿ ಹಾಗೂ (೫) ಸೇವೆ. ಇವುಗಳ ಬಗ್ಗೆ ಡಿಸೆಂಬರ್ ೨೦೦೯ರ 'ವಿವೇಕಪ್ರಭ' ಸಂಚಿಕೆಯಲ್ಲಿ ಒಂದು ಪುಟದ ಸಂಕ್ಷಿಪ್ತ ಲೇಖನ ಈಗಾಗಲೇ ಪ್ರಕಟವಾಗಿದೆ. ಈ ಸೂತ್ರಗಳ ಬಗ್ಗೆ ಸ್ವಾಮೀಜಿಯವರು ತಮ್ಮ ಮಾತುಕತೆಗಳಲ್ಲಿ ತಿಳಿಸಿದ ಅಭಿಪ್ರಾಯಗಳು ಹಾಗೂ 'ಬದುಕಲು ಕಲಿಯಿರಿ' ಗ್ರಂಥದಲ್ಲಿ ವ್ಯಕ್ತಪಡಿಸಿದ ವಿಚಾರಗಳನ್ನು ಆಧರಿಸಿ, ಈ ಲೇಖನಮಾಲೆಯನ್ನು ರಚಿಸಲಾಗಿದೆ. ಹೀಗೆ ಸ್ವಾಮಿ ಜಗದಾತ್ಮಾನಂದಜಿ ಅವರ ವಿಚಾರಗಳನ್ನು ಸಂಗ್ರಹಿಸಿ, ವಿಂಗಡಿಸಿ, ಪರಿಷ್ಕರಿಸಿ ಈ ಲೇಖನದ ರೂಪವನ್ನು ನೀಡಿದವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಭಕ್ತರಾದ ಡಾ. ಪಾಂಡುರಂಗ ವಿಠಲ ಅವರು. ಇವರ ಈ ಉದಾತ್ತ ಸೇವೆಗೆ ನಾವು ಚಿರಋಣಿಗಳು – ಸಂ.

# ವಿದ್ಯಾರ್ಥಿಗಳಿಗಾಗಿ ಪಂಚಶೀಲ

ಸ್ವಾಮಿ ಜಗದಾತ್ಮಾನಂದ

**ವಿದ್ಯಾಭ್ಯಾಸ ಎಂದರೇನು?** ವ್ಯಕ್ತಿಯು ತನ್ನ ಅಭ್ಯುದಯಕ್ಕೆ ಹಾಗೂ ಸಮಾಜಕಲ್ಯಾಣಕ್ಕೆ ಕಾರಣವಾಗುವ ಜ್ಞಾನ ಮತ್ತು ದಕ್ಷತೆಗಳನ್ನು ಸಂಪಾದಿಸಿಕೊಳ್ಳುವುದಕ್ಕೆ 'ವಿದ್ಯಾಭ್ಯಾಸ' ಎನ್ನುತ್ತಾರೆ. ವಿದ್ಯಾಭ್ಯಾಸದ ಸಾಫಲ್ಯಕ್ಕೆ ಕಾರಣವಾಗುವ ಐದು ಸೂತ್ರಗಳೇ **'ಪಂಚಶೀಲಗಳು.'** ಅವನ್ನು ಈಗ ನಾವು ಒಂದೊಂದಾಗಿ ನೋಡೋಣ.

೧} **ಜಿಜ್ಞಾಸೆ ಅಥವಾ ಅರಿವಿನ ಹಂಬಲ :** ಮನುಷ್ಯನಲ್ಲಿ ಮೂರು ಹಂಬಲಗಳು ಪ್ರಬಲವಾಗಿರುತ್ತವೆ: ಅವೇ **'ಬದುಕಬೇಕು', 'ಸಂತೋಷಪಡಬೇಕು', 'ಅರಿಯಬೇಕು'.** ಇವುಗಳಲ್ಲಿ ಕಡೆಯದಾದ ಅರಿಯುವ ಹಂಬಲವು ಉಳಿದ ಎರಡನ್ನು ನಿಯಂತ್ರಿಸುತ್ತದೆ. 'ಜಿಜ್ಞಾಸೆ' ಎಂದರೆ ಬರಿಯ ಕ್ಷಣಿಕ ಕುತೂಹಲವಲ್ಲ. ಅದು, ೧) ಜ್ಞಾನಕ್ಕಾಗಿ ಜ್ಞಾನವನ್ನು ಪಡೆಯುವ ಹಂಬಲ; ೨) ಚರಮಸತ್ಯವನ್ನು ತಿಳಿಯಬೇಕೆಂಬ ತೀವ್ರ ಆಕಾಂಕ್ಷೆ, ಜ್ಞಾನಕ್ಕಾಗಿ ಹಂಬಲಿಸುವುದು, ಅದಕ್ಕಾಗಿ ದುಡಿಯುವುದು ಮತ್ತು ಕೊನೆಗೆ ಸತ್ಯವನ್ನು ತಿಳಿದಾಗ ಆನಂದಿಸುವುದು. ಹೀಗೆ ಆನಂದಿಸುವುದಕ್ಕೆ ಉದಾಹರಣೆ 'ಅರ್ಕಿಮಿಡೀಸ್'.

**ಅರ್ಕಿಮಿಡೀಸ್‌ನ ಆನಂದ:** ಗ್ರೀಕ್ ದೇಶದ ಸಿರಾಕ್ಯೂಸ್‌ನ ದೊರೆ ತಾನು ಮಾಡಿಸಿದ ಚಿನ್ನದ ಕಿರೀಟದಲ್ಲಿ ಅಕ್ಕಸಾಲಿಗನು ಬೇರೆ ಲೋಹ ಬೆರೆಸಿರಬಹುದೆಂದು ಅನುಮಾನಿಸಿದ; ಸಂದೇಹಪರಿಹಾರಕ್ಕಾಗಿ ಒಂದು ಪಂಥಾಹ್ವಾನವಿಟ್ಟ. ಅದನ್ನು ಸ್ವೀಕರಿಸಿದ ಅರ್ಕಿಮಿಡೀಸ್ ಹಗಲಿರುಳೂ ಏಕಾಗ್ರಚಿತ್ತದಿಂದ ಚಿಂತನೆ ನಡೆಸುತ್ತಾ ಇದ್ದಾಗ ಸ್ನಾನದ ತೊಟ್ಟಿಯಲ್ಲಿ ಜಾರಿಬಿದ್ದ. ನೀರು ತುಳುಕಿ ಹೊರಚೆಲ್ಲಿತು. ಸಾಪೇಕ್ಷ ಸಾಂದ್ರತೆಯ ಸಿದ್ಧಾಂತದ ತೇಲುವಿಕೆಯ ನಿಯಮದ ಸಾಕ್ಷಾತ್ಕಾರ ಆಗ ಅವನಿಗೆ ಉಂಟಾಗಿ, ಹೊರಬಂದು 'ಯುರೇಕಾ' ಎಂದು ಅತ್ಯಾನಂದದಿಂದ ಬತ್ತಲೆಯಾಗಿಯೇ ರಸ್ತೆಯಲ್ಲಿ ಓಡಿದ!

ಮನಸ್ಸಿನ ಪೂರ್ಣಶಕ್ತಿಯನ್ನು ಉಪಯೋಗಿಸಿ ಏಕಾಗ್ರಚಿತ್ತದಿಂದ ನಿರಂತರ ಶ್ರಮಿಸಿದ, ಹಗಲಿರುಳೂ ಕಾತರಿಸಿದ ಅರ್ಕಿಮಿಡೀಸ್ ಆ ಸತ್ಯದ ಸಾಕ್ಷಾತ್ಕಾರವಾಗುತ್ತಲೆ ಆನಂದಾತಿರೇಕದಿಂದ ಮೈಮರೆತ. ಜ್ಞಾನಕ್ಕಾಗಿನ ಹಂಬಲ, ಅದಕ್ಕಾಗಿನ ದುಡಿಮೆ ಮಾತ್ರವೇ ಇಂತಹ ಆನಂದವನ್ನು ತರಬಲ್ಲುದು, ಉತ್ಸಾಹ ಸ್ಫೂರ್ತಿಗಳನ್ನು ನೀಡಬಲ್ಲುದು. ಪ್ರತಿಭೆಯ ಹಿಂದೆ ಪರಿಶ್ರಮವಿದೆ. ಪ್ರಾಮಾಣಿಕ, ಅವಿಶ್ರಾಂತ ಶ್ರಮದಿಂದ ಮಾತ್ರ ಯಾವುದೇ ಕ್ಷೇತ್ರದಲ್ಲಿ ಅತ್ಯುನ್ನತ ಸಿದ್ಧಿ ಪ್ರಾಪ್ತವಾಗುತ್ತದೆ. 'ಜ್ಞಾನ' ಎಂದರೆ ಬರೀ ಮಾಹಿತಿ ಸಂಗ್ರಹ ಮಾಡುತ್ತ ಹೋಗುವುದಲ್ಲ, 'ವರ್ತಮಾನ ಕಾಲದಲ್ಲಿ ಬದುಕುವುದು'. ನಿನ್ನೆಯ ಚಿಂತೆಗಳನ್ನು ಕೈಬಿಟ್ಟು, ನಾಳಿನ ಘಟನೆಗಳ ಬಗ್ಗೆ ಕನಸು ಕಾಣುತ್ತ ಉದ್ವಿಗ್ನರಾಗದೆ, ವರ್ತಮಾನದಲ್ಲಿ ಮಾಡಬೇಕೆಂದು ಯೋಚಿಸಿದ ಕೆಲಸಗಳನ್ನು ಪೂರ್ಣ ಮನಸ್ಸಿಟ್ಟು, ದಕ್ಷತೆಯಿಂದ ಮಾಡುವುದು.

**ಏಕಾಗ್ರತೆಯ ಚಮತ್ಕಾರ:** ಸ್ವಾಮಿ ವಿವೇಕಾನಂದರು ತಮಗೆ ಇನ್ನೊಮ್ಮೆ, ಎಲ್ಲವನ್ನೂ ಮೊದಲಿನಿಂದ ಕಲಿಯುವ ಅವಕಾಶ ಸಿಕ್ಕಿದರೆ, ಬೇರೆ ಏನನ್ನೂ ಕಲಿಯುವುದಕ್ಕಿಂತ ಮುಂಚೆ ಏಕಾಗ್ರತೆಯನ್ನು ಕಲಿಯುತ್ತೇನೆ ಎನ್ನುತ್ತಾರೆ. ನಮ್ಮ ಬಗೆಗಾಗಲಿ, ಪ್ರಪಂಚದ ಬಗೆಗಾಗಲಿ ನಾವು ಪಡೆಯುವ ಜ್ಞಾನವು ನಮ್ಮ ಏಕಾಗ್ರತೆಯನ್ನು, ಹಂಬಲವನ್ನು ಅವಲಂಬಿಸಿದೆ. ಆಸಕ್ತಿಯು ಏಕಾಗ್ರತೆಯನ್ನೂ, ಏಕಾಗ್ರತೆಯು ಆಸಕ್ತಿಯನ್ನೂ ಪರಸ್ಪರ ಪ್ರಚೋದಿಸುತ್ತದೆ.

**ಸ್ವಪ್ರಜ್ಞೆಯೇ ನಿಜವಾದ ಪ್ರಜ್ಞೆ:** ಸ್ವ–ನಿಯಂತ್ರಣ, ಸ್ವ–ನಿರ್ದೇಶನ – ಈ ಎರಡೂ ಸ್ವಾಧ್ಯಾಯಕ್ಕೆ ಅತ್ಯಂತ ಅವಶ್ಯಕ. ತನ್ನನ್ನು ತಾನು ಅರಿತಾಗಲೇ ಪ್ರಪಂಚದ ಬಗೆಗಿನ ನಮ್ಮ ಜ್ಞಾನ ಅರ್ಥಪೂರ್ಣವಾಗುವುದು. ನಮ್ಮ ವ್ಯಕ್ತಿತ್ವದಲ್ಲಿ ಕಾಣಿಸದ, ನಮ್ಮಲ್ಲಿ ಬದಲಾವಣೆ ತಾರದ ಜ್ಞಾನವು ಜ್ಞಾನವೇ ಅಲ್ಲ. ಸ್ವಾಮಿ ವಿವೇಕಾನಂದರು ಹೀಗೆನ್ನುತ್ತಾರೆ: "ನಾನು ಕಲಿತ ಅತ್ಯಂತ ಮಹತ್ವದ ಪಾಠಗಳಲ್ಲಿ ಒಂದು –